ದೊಡ್ಡ ದೊಡ್ಡ ಬಂಡೆಗಳನ್ನು ದಾಟಿ ಕೆರೆಯ ಸಮೀಪ ಬಂದರು. ಆಗಷ್ಟೇ ಬಾತುಕೋಳಿಗಳ ಒಂದು ಗುಂಪು ಪೆರೇಡ್ ಹೊರಟಂತೆ ಕಾಣುತ್ತಿದ್ದವು. ಬಿಸಿಲಿನ ತಾಪ ಕಡಿಮೆಯಾಗುತ್ತಿದ್ದುದರಿಂದ ತಾವರೆಗಳು ತಲೆಎತ್ತಿ ಗಾಳಿಗೆ ಓಲಾಡುತ್ತಿದ್ದವು.

ಇಬ್ಬರೂ ಕೆರೆಗೆ ಸಮೀಪದ ಕಲ್ಲುಬಂಡೆಯೊಂದನ್ನು ಒರಗಿಕೊಂಡು ಕುಳಿತರು.

'ವಾವ್, ಬೆಂಗಳೂರಲ್ಲಿ ಕೆರೆಗಳು ನಾಶವಾಗ್ತಿವೆ, ಪರಿಸರ ಹಾಳಾಗ್ತಿದೆ ಅಂತ ಹುಯಿಲೆಬ್ಬಿಸೋ ಜನ ಇಲ್ಲಿಗೆ ಬಂದು ನೋಡ್ಬೇಕು ಋತು, ಇರುವ ಪರಿಸರವನ್ನೇ ಚೆನ್ನಾಗಿ ಕಾಪಾಡಿಕೊಂಡ್ರೆ ಸಾಕು....ನಮ್ಮ ಭೂಮಿ ಸ್ವರ್ಗ ಸಮಾನವಾಗುತ್ತೆ.'

ಮನತುಂಬಿ ಹೇಳಿದಳು ರಮ್ಯ.

ಆದರೆ ಋತುವಿಗೆ ಅವಳ ಮಾತುಗಳತ್ತ ಗಮನ ಇದ್ದಂತೆ ಕಾಣಲಿಲ್ಲ. ತನ್ನದೇ ಲೋಕದಲ್ಲಿದ್ದಂತೆ ಕಂಡಳು.

'ರಮ್ಯ, ನೀನ್ಯಾಕೆ ಇನ್ನೂ ಮದ್ವೆ ಮಾಡಿಕೊಂಡಿಲ್ಲ?'

ಏಕಾಏಕಿ ಗೆಳತಿಯಿಂದ ಪ್ರಶ್ನೆ ತೂರಿ ಬಂದಾಗ ಗಲಿಬಿಲಿಗೊಂಡಳು. ಇದೆಂಥಾ ಪ್ರಶ್ನೆ?....ಇದನ್ನೇಕೆ ಈಗ ಇಲ್ಲಿ ಕೇಳುತ್ತಿದ್ದಾಳೆ ಋತು....! ಅರ್ಥವಾಗದವಳಂತೆ ಅವಳತ್ತ ನೋಡಿದಳು.

'ಹೇಳು ರಮ್ಯ.... ಸಂಕೋಚ ಯಾಕೆ? ನೀನ್ಯಾಕೆ ಇನ್ನೂ ಮದ್ವೆಯಾಗಿಲ್ಲ.'

ಹೆಚ್ಚು ಕಡಿಮೆ ತನ್ನದೇ ವಯಸ್ಸಿನ ಋತುವಿನಿಂದ ಮತ್ತದೇ ಪ್ರಶ್ನೆ ತೂರಿ ಬಂದಾಗ ನಿರುತ್ತರಳಾದಳು. ಆದರೆ ಏನಾದರೂ ಅವಳಿಗೆ ಉತ್ತರಿಸಲೇಬೇಕಿತ್ತು.

'ಪ್ಲೀಸ್, ಹೇಳು ರಮ್ಯ'

ಗೆಳತಿಯ ಭುಜವನ್ನು ಅಲುಗಿಸಿ ಋತು ಮತ್ತೆ ಕೇಳಿದಳು.

ಋತು, ನಂಗೆ ಮದ್ವೆಯಾಗಿಲ್ಲ ಅಂತ ನಿಂಗ್ಯಾರು ಹೇಳಿದ್ರು? ನಂಗೆ ಮದ್ವೆಯಾಗಿದೆ ಕಣೆ, ನಂದು ದುರಂತ ದಾಂಪತ್ಯದ ಒಂದು ದೊಡ್ಡ ಕಥೆ, ಈಗ ಬೇಡ, ಮುಂದೆ ಯಾವಾಗಲಾದ್ರೂ ಸಮಯ ಬಂದಾಗ ಖಂಡಿತಾ ಹೇಳ್ತೀನಿ, ನನ್ನ ಜೊತೆ ಏನೋ ಮಾತಾಡ್ಬೇಕು ಅಂತ ಕರೆದುಕೊಂಡು ಬಂದವ್ಳು ನೀನು, ನೀನೀಗ ಮಾತಾಡ್ಬೇಕು, ಇವತ್ತು ನಿನ್ನ ದಿನ....

ಗೆಳತಿಯ ಮಾತಿಗೆ ಚಕಿತಳಾದಳು ಋತು. ಇದು ನಿಜವೇ? ರಮ್ಯಾಳಿಗೆ ಮದುವೆಯಾಗಿದೆಯೇ? ಆದರೆ ಒಂದು ದಿನವೂ ಅವಳು ನೊಂದು ಹತಾಶೆಯಿಂದ ಮಾತನಾಡಿದವಳಲ್ಲ. ಅವಳ ಮಾನಸಿಕ ಸ್ಥೈರ್ಯ ಋತುವನ್ನು ಅಚ್ಚರಿಗೊಳಿಸಿತು.

'ಸರಿ ರಮ್ಯ, ಇವತ್ತು ಬಂಗ್ಲೇಲಿ ನೀನು ಬರುವುದಕ್ಕೆ ಮುಂಚೆ ಪಪ್ಪ ನನ್ನ ಮದ್ವೆಯ ಪ್ರಸ್ತಾಪ ಮಾಡಿದ್ರು, ಈ ಯುಗಾದಿಯ ಸಮಯಕ್ಕೆ ನನ್ನ ಮದ್ವೆ ಮಾಡುವ ಯೋಚನೆ ಅವರದ್ದು.'

'ಓ....ಒಳ್ಳೇದೇ ಆಯ್ತಲ್ಲ ಋತು, ಒಬ್ಬ ಒಳ್ಳೆಯ ಹುಡುಗನನ್ನು ಆರಿಸಿಕೊಂಡು ಲೈಫಲ್ಲಿ ಸೆಟಲ್ ಆಗ್ಬಿಡೋದು ತಾನೇ?....ಅದಕ್ಯಾಕೆ ಯೋಚಿಸ್ಬೇಕು ನೀನು....' ರಮ್ಯಾಳಿಗೆ ಗೊಂದಲವೆನಿಸಿತು.

'ಹೌದು, ಮದ್ವೆಯಾಗೋದು ಒಳ್ಳೆಯದೇ....ಆದ್ರೆ ರಮ್ಯ....ನಾನು ಹೇಮಂತನ್ನ ನನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸ್ತೀನಿ ಕಣೆ, ಜೀವನ ಸಂಗಾತಿ ಅಂತ ಆಗೋದಾದ್ರೆ ಅದು ಹೇಮಂತ ಮಾತ್ರಾ.... ಅವ್ನನ್ನು ಬಿಟ್ಟು ಪಪ್ಪ ತೋರಿಸೋ ಹುಡುಗನ್ನ ನಾನು ಖಂಡಿತಾ ಮದ್ವೆಯಾಗಲ್ಲ.'

'ಸರಿ ಬಿಡು ಹಾಗಾದ್ರೆ..... ನೀನು ಅವ್ನನ್ನು ಅಷ್ಟು ಪ್ರೀತಿಸ್ತಿದ್ರೆ ಅಂಕಲ್ ಹತ್ರ ಹೇಳ್ಬೋದಲ್ಲ, ಎರಡೂ ಕಡೆಯವರ ಒಪ್ಪಿಗೆ ಪಡೆದೇ ಮದ್ವೆಯಾದ್ರೆ ಜೀವನ ಇನ್ನೂ ಸಲೀಸು ಅಲ್ವಾ ಋತು, ಅದಿರ್ಲಿ ಯಾರು ಆ ಹೇಮಂತ?....ನಿನ್ನ ಮನಸ್ಸನ್ನು ಕದ್ದಿರುವ ತುಂಟ...'.

ಅದೇ ಇಲ್ಲಿರುವ ಸಮಸ್ಯೆ ರಮ್ಯ, ಹೇಮಂತ ನನ್ನ ಹೈಸ್ಕೂಲ್‌ಮೇಟ್, ನಾನು ಒಂಭತ್ತನೇ ತರಗತಿ ಓದುವಾಗ ಅವನು ಹತ್ತರಲ್ಲಿದ್ದ. ತುಂಬಾ ಚೂಟಿಯಾದ ಹುಡುಗ ಅವ್ನು. ಓದೋದ್ರಲ್ಲಿ, ಸ್ಪೋರ್ಟ್ಸಲ್ಲಿ ಎಲ್ಲದ್ರಲ್ಲೂ ಮುಂದಿದ್ದ. ಅವ್ನಂದ್ರೆ ಅದೇನೋ ಆಕರ್ಷಣೆ ಆಗ....

ಅದೆಲ್ಲಾ ಇರ್ಲಿ ಋತು, ಅವ್ನೀಗ ಏನು ಮಾಡ್ತಿದ್ದಾನೆ ಒಂದು ದಿನ ಅವನನ್ನು ಬಂಗಲೆಗೆ ಕರ್ಕೊಂಡು ಹೋಗಿ ಅಂಕಲ್ಗೆ ಪರಿಚಯ ಮಾಡ್ಸು, ನಿನ್ನ ಪ್ರಾಬ್ಲಂ ಸಾಲ್ವ್ ಆಗುತ್ತಲ್ಲ....

ಇಲ್ಲ ರಮ್ಯ, ಹಾಗೆ ಮಾಡೋಕಾಗಲ್ಲ, ಯಾಕೇಂದ್ರೆ ಆ ದಿನಗಳಾದ ಮೇಲೆ ಮತ್ತೆ ನಾನವನನ್ನು ನೋಡಿಯೇ ಇಲ್ಲ, ಸುಮಾರು 13 ವರ್ಷಗಳಾದವಲ್ಲ, ಆದ್ರೆ ನಂಗೆ ಅವನನ್ನು ಮರೆಯೋಕಾಗ್ತಿಲ್ಲ....

ನೀನೊಳ್ಳೆ ಮೆಂಟಲ್ ಕಣೇ ಋತು, ಟೀನ್ ಏಜ್ ಅಟ್ರಾಕ್ಷನ್ನ ಪ್ರೀತಿ ಅಂತ ನಂಬ್ಕೊಂಡು ಇಷ್ಟು ವರ್ಷ ಮದ್ವೆಯಾಗ್ದೆ ಕೂತಿದ್ದಿಯಾ? ಕೋಟೆಬಂಗ್ಲೇಲಿ ಹುಟ್ಟು ಹಿಡಿದಿರುವ ರಾಜಕುಮಾರಿ ನೀನು....

ಜೋರಾಗಿ ರಮ್ಯ ನಗತೊಡಗಿದಳು.

ಇಲ್ಲ ಕಣೇ ರಮ್ಯ, ಹೇಮಂತನನ್ನು ಮರೆಯದೆ ಇರೋಕೆ ಇನ್ನೊಂದು ಕಾರಣವೂ ಇದೆ.... ಎಂದೇನೋ ಋತು ಹೇಳುವುದರಲ್ಲಿದ್ದಳು. ಅಷ್ಟರಲ್ಲಿ ಬಂಡೆಗೆ ಆತುಕೊಂಡು ನೀಲಿ ಟೀ ಶರ್ಟ್ ಧರಿಸಿದ್ದ ವ್ಯಕ್ತಿಯೊಂದು ತಮ್ಮ ಮಾತುಗಳನ್ನು ಆಲಿಸುತ್ತಿದ್ದುದು ನಗುತ್ತಿದ್ದ ರಮ್ಯಾಳ ಗಮನಕ್ಕೆ ಬಂದು ಬೆಚ್ಚಿದಳು.

**4**

## ಯಾರೀತ?

ಬಂಗಲೆಯಿಂದ ಹೊರಟಾಗಲೇ ರಮ್ಯ ಅವನನ್ನು ಗಮನಿಸಿದ್ದಳು. ಆದರೆ ಅಷ್ಟಾಗಿ ಗಮನ ಹರಿಸಿರಲಿಲ್ಲ. ಈಗ ಅದೇ ವ್ಯಕ್ತಿ ತಾವು ಕುಳಿತಿರುವ ಬಂಡೆಯ ಇನ್ನೊಂದು ಬದಿಯಲ್ಲಿ ಕುಳಿತು ತಮ್ಮ ಮಾತುಗಳನ್ನು ಆಲಿಸುತ್ತಿದ್ದಾನೆ....! ಈಗ ಮಾತ್ರವೇ ಅಲ್ಲ, ನಾಲ್ಕಾರು ಬಾರಿ ಬಂಗಲೆಗೆ ಬಂದಾಗಲೂ ರಮ್ಯ ಅವನನ್ನು ಗಮನಿಸಿದ್ದಾಳೆ. ಋತು ತನ್ನ ಜೊತೆ ಇದ್ದಾಗ ಮಾತ್ರ ಆತ ಹಿಂಬಾಲಿಸುವುದು ಅವಳಿಗೆ ಆಶ್ಚರ್ಯ ತರಿಸಿತು. ಅಂದರೆ....ಋತುವನ್ನು ಯಾರೋ ಹಿಂಬಾಲಿಸುತ್ತಿದ್ದಾರೆ....ಆದರೆ ಅದ್ಯಾವ ಕಾರಣವೆಂದು ಅವಳಿಗೆ ಊಹಿಸಲಾಗಲಿಲ್ಲ.

ಈಗ ಅವಳು ಜಾಗ್ರತಗೊಂಡಳು. ಋತು ಮಾತನಾಡುವುದನ್ನು ತಡೆಯಬೇಕು. ಆದರೆ ತಾನು ಗಮನಿಸಿದ ವಿಷಯ ಆ ವ್ಯಕ್ತಿಗೆ ತಿಳಿಯಬಾರದು....

ಋತು....ಒಂದ್ನಿಮಿಷ....

ತನ್ನನ್ನು ಮಾತನಾಡದಂತೆ ತಡೆದ ಗೆಳತಿಯತ್ತ ಋತು ಪ್ರಶ್ನಾರ್ಥಕವಾಗಿ ನೋಡಿದಳು.

'ಋತು, ನನ್ನ ತಲೆಯಲ್ಲಿ ಕಾಲೇಜಿನ ವಿಷಯವೇ ತುಂಬಿ ಹೋಗಿದೆ, ಈಗ ನಂಗೆ ಬೇರ್ಯಾವ ವಿಷಯವನ್ನು ಕೇಳ್ಲಿಕ್ಕೂ ಇಂಟರೆಸ್ಟ್ ಇಲ್ಲ, ಪ್ಲೀಸ್ ಕಣೆ, ಬೇಜಾರು ಮಾಡ್ಕೋಬೇಡ, ಇನ್ಯಾವಾಗಾದ್ರೂ ನಿನ್ನ ಹೇಮಂತನ ಬಗ್ಗೆ ಮಾತನಾಡಿದರಾಯ್ತು....'

ಈ ದಿನ ರಮ್ಯಾಳಿಗೆ ತನ್ನ, ಹೇಮಂತನ ವಿಷಯವನ್ನು ಹೇಳಲೇಬೇಕೆಂದು ಇಷ್ಟು ದೂರ ಬಂದಿದ್ದ ಋತುವಿಗೆ ನಿರಾಸೆಯಾದರೂ ತನ್ನನ್ನು ಮಾತನಾಡದಂತೆ ತಡೆದ ರಮ್ಯಾಳ ನಡವಳಿಕೆಗೆ ಏನಾದರೂ ಕಾರಣವಿರಲೇಬೇಕೆಂದು ಊಹಿಸಿದಳು. ಏಕೆಂದರೆ ರಮ್ಯ ಬಾಯಿಗೆ ಬಂದ ಹಾಗೆ ಮಾತನಾಡುವವಳಲ್ಲವಲ್ಲ. ಹಾಗಾಗಿ ಆ ಬಗ್ಗೆ ಅವಳು ಮತ್ತೆ ಕೆದಕುವುದಕ್ಕೆ ಹೋಗಲಿಲ್ಲ.

ಮತ್ತೆ ಸ್ವಲ್ಪ ಹೊತ್ತು ಗೆಳತಿಯರು ಸಾದಾರಣವಾಗಿ ಮಾತನಾಡಿದರು. ಪ್ರಶಾಂತನ ಕೊಲೆ ಕಾಲೇಜಿನಲ್ಲಿ ಯಾವ ಪರಿಣಾಮವನ್ನು ಬೀರಬಹುದೆಂದು ಚರ್ಚಿಸತೊಡಗಿದರು.

ಸಂಜೆ ಕಳೆಯತೊಡಗಿ ಕೆರೆಯ ಮೇಲಿನಿಂದ ಶೀತಲ ತಂಪುಗಾಳಿ ಬೀಸತೊಡಗಿತ್ತು. ಒಂದಷ್ಟು ನೀರಹಕ್ಕಿಗಳು ಕೆರೆಯಲ್ಲಿ ಕಲರವವೆಬ್ಬಿಸ ತೊಡಗಿದ್ದವು. ಕೆರೆದಂಡೆಯಲ್ಲಿ ಈ ದಿನ ಜನ ವಿರಳವಾಗಿದ್ದರು. ಈಗಂತೂ ಯಾರೊಬ್ಬರೂ ಇಲ್ಲದೆ ಆ ಜಾಗ ನಿರ್ಜನವಾಗತೊಡಗಿತ್ತು.

ಗೆಳತಿಯರಿಬ್ಬರೂ ಮೇಲೆದ್ದರು. ತಾವು ಮೇಲೆದ್ದ ಕೂಡಲೇ ಇದುವರೆಗೆ ಗಮನಕ್ಕೆ ಬರದಂತೆ ಕುಳಿತುಕೊಂಡಿದ್ದ ಆ ವ್ಯಕ್ತಿಯೂ ಮೇಲೆದ್ದಿತು. ಬಂಡೆಗಳನ್ನೂ, ಕುರುಚಲು ಗಿಡಗಳನ್ನೂ ದಾಟಿ ರಸ್ತೆಗೆ ಬಂದರು. ಬಂಗಲೆಯ ಸಮೀಪ ಬರುವವರೆಗೂ ಹಿಂಬಾಲಿಸುತ್ತಿದ್ದ ಆ ವ್ಯಕ್ತಿ ಸರಸರನೆ ಮತ್ತೆಲ್ಲಿಗೋ ಹೊರಟುಹೋಯಿತು. ಇದನ್ನೂ ಗಮನಿಸಿದಳು ರಮ್ಯ.

ರಮ್ಯ, ನಿಂಗಿವತ್ತು ಹೇಮಂತನ ವಿಷ್ಯವನ್ನು ಹೇಳ್ಲೇಬೇಕು ಅಂತಿದ್ದೆ, ನೀನ್ಯಾಕೆ ನನ್ನನ್ನು ತಡೆದೆ.... ಕೆನ್ನೆಯುಬ್ಬಿಸಿದಳು ಋತು.

**(ಸಶೇಷ)**